ಶ್ರೀ ಎಚ್. ಡಿ. ದೇವೇಗೌಡ.—ಕಲ್ಕತ್ತಾದಿಂದ ಅದಕ್ಕೆ ಸ್ಪೇರ್‌ವಾರ್ಟ್ಸ್ ತರಿಸುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ ಎಂದು ಹೇಳುತ್ತಾ ಇದ್ದಾರೆ. ಹಣಕಾಸಿನ ಸ್ಥಿತಿ ಅಲ್ಲಿ ನರಿಯಾಗಿ ಇಲ್ಲದೇ ಇರುವುದರಿಂದ ಸರ್ಕಾರದಿಂದ ಸ್ವಲ್ಪ ಗ್ರಾಂಟು ಕೊಟ್ಟು ಜ್ಯೂಯರ್ ಪಿರ್ಕ್ಸ್‌ನ್ನು ನರಿಪಡಿಸುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಭರವಸೆ ಕೊಟ್ಟಿದ್ದರು. ಅದರ ಮೇರೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ ಎಂದು ಈ ಸಭೆಗೆ ಹೇಳಿದ್ದಾರೆ. ಆದ್ದರಿಂದ ಅದಷ್ಟು ಜಾಗ್ರತೆ ಅದನ್ನು ನರಿಪಡಿಸಿ ಒಳ್ಳೆಯ ನೀರನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

Sri R. M. PATIL.—That is a different question. The Government will take action on the proposal of the municipality. The question and answer are entirely different and the suggestion is entirely different.

Distribution of Artificial Manure

*Q.—365. Sri N. NANJEGOWDA (Krishnarajpet).—

Will the Government pleased to state :—

whether they are distributing the artificial manure through Co-operative Societies in the State (including Marketing Societies) as per Government Orders ?

A.—Sri S. NIJALINGAPPA (Chief Minister) [on behalf of Sri G. NARAYANA GOWDA (Minister for Agriculture).].—

Yes.

ಶ್ರೀ ಎನ್. ನಂಜೇಗೌಡ.—ಗೊಬ್ಬರವನ್ನು ರೀಟೇರ್‌ನಲ್ಲಿ ಒಂದು ಜನ್‌ಗೆ ಹೇಗೆ ಮಾರ ಬೇಕೆಂದು ರೇಟ್ ನಿಗದಿ ಮಾಡಿದ್ದೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ಅಮೋನಿಯಂ ನರ್ಟ್ರೇಟ್ 376 ರೂಪಾಯಿ. ಅದು ಅಪೆಕ್ಸ್ ರೆವರ್‌ನಲ್ಲಿ. ಯೂರಿಯ 630 ರೂಪಾಯಿ. ಅಮೋನಿಯಂ ನೈಟ್ರೇಟ್ 466 ರೂಪಾಯಿ. ಕ್ಯಾರ್‌ಷಿಯಂ ಅಮೋನಿಯಂ ನೈಟ್ರೇಟ್ 375 ರೂಪಾಯಿ. ಇದರ ಜೊತೆಗೆ ಶೇಕಡ 30ರಂತೆ ಜಾಸ್ತಿಯಾಗುತ್ತದೆ.

ಶ್ರೀ ಎನ್. ನಂಜೇಗೌಡ.—ನಾನು ಪ್ರಶ್ನೆ ಕೊಟ್ಟು ಎರಡು ವರ್ಷ ಆಯಿತು. ಹಿಂದೆ ಇದಕ್ಕೆ ಏನು ರೇಟ್ ನಿಗದಿ ಮಾಡಿದ್ದಿರಿ, ಸಹಕಾರ ಸಂಘಗಳಲ್ಲಿ ಯಾವ ರೇಟ್‌ನಲ್ಲಿ ಮಾರಿದ್ದಾರೆ ಎಂಬುದನ್ನು ದಯವಿಟ್ಟು ಪರಿಶೀಲಿಸುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಮತ್ತೊಂದು ಪ್ರಶ್ನೆಯನ್ನು ಕೇಳಿದರೆ ಹೇಳುತ್ತೇನೆ.

ಶ್ರೀ ಇ. ನಾರಾಯಣ ಗೌಡ.—ಮಾರ್ಕೆಟಿಂಗ್ ಸೊಸೈಟಿಗಳವರಿಗೆ ಈಗ ಒಂದು ತಿಂಗಳಿನ ಹಿಂದೆ ಒದಗಿಸಿದ್ದೀರಿ. ಅವರು ಇದುವರೆಗೂ ಅದನ್ನು ಮಾರಾಟ ಮಾಡುವುದಕ್ಕೆ ಕ್ರಮತೆಗೆದು ಕೊಳ್ಳದೆ ಇರುವುದರಿಂದ ತೊಂದರೆಯಾಗಿದೆ. ಆದ್ದರಿಂದ ಜಾಗ್ರತೆ ಮಾರಾಟ ಮಾಡುವುದಕ್ಕೆ ರೇಟ್ ನಿಗದಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡು ತ್ತಾರೆ.

ಶ್ರೀ ಬಿ. ಚನ್ನಬೈರೇಗೌಡ.—ಅನೇಕ ಸೊಸೈಟಿಗಳವರು ಡಿಫಾರ್ಟ್‌ರ್ಸ್ ಆಗಿರುವುದರಿಂದ ಅವು ಗಳನ್ನು ಮಾರಾಟ ಮಾಡುವುದಕ್ಕೆ ಪ್ರೈವೇಟ್ ಡೀಲರ್ಸ್ ಯಾರಾದರೂ ಮುಂದೆ ಬಂದರೆ 'ಸೆಟ್ಲಿಂಗ್ ಪ್ರೈಸ್' ಜಾಸ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಸೊಸೈಟಿಗಳ ಮೂಲಕ ಎಲ್ಲಾ ಕಡೆಯಲ್ಲೂ ಸಿಕ್ಕುತ್ತಾ ಇದೆ. ಎಲ್ಲಾದರೂ ಸೊಸೈಟಿ ಸರಿಯಾಗಿ ಕೆಲಸ ಮಾಡದಿದ್ದರೆ ಸರ್ಕಾರ ಅದನ್ನು ನರಿಪಡಿಸುತ್ತದೆ.

ಶ್ರೀ ಸಿದ್ದಯ್ಯ ಕಾಶೀಮಠ.—ಸಹಕಾರ ಸಂಘಗಳ ಮೂಲಕ ಗೊಬ್ಬರ ಹಂಚುವಾಗ ಆ ಸಂಘಗಳಿಗೆ ನಷ್ಟವಾಗುತ್ತಿರುವುದರಿಂದ ಸಂಘಗಳಿಗೆ ಕೊಡುವ ಕಮಿಷನ್ನನ್ನು ಹೆಚ್ಚಿಸುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಈಗ ಕೊಡುವ ಕಮಿಷನ್ ಸರಿಯಾಗಿದೆ ಎಂದು ತೋರುತ್ತದೆ, ಆ ವಿಚಾರದಲ್ಲಿ ನಮಗೇನೂ ದೂರು ಬಂದಿಲ್ಲ.

ಶ್ರೀ ಎನ್. ನಂಜೇಗೌಡ.—ಸಹಕಾರ ಸಂಘಗಳಲ್ಲಿ ಗೊಬ್ಬರವನ್ನು ತೂಕಮಾಡಿ ಕೊಡದೆ ಮೂಟೆಗೆ 8 ಮಣ ಎಂದು ಹೇಳಿ ಮೂಟೆ ಲೆಕ್ಕದಲ್ಲಿ ಕೊಡುತ್ತಿದ್ದಾರೆ. ಆದರೆ ಒಂದು ಮೂಟೆಗೆ ಆರೂವರೆ ಮಣ ಬರುವುದು, ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯವರು ಮತ್ತು ಡಿಸ್ಟ್ರಿಕ್ಟ್ ಮಾರ್ಕೆಟಿಂಗ್ ಸೊಸೈಟಿಯವರು ಕೂಡ ಮೂಟೆ ಲೆಕ್ಕದಲ್ಲೇ ಕೊಡುತ್ತಿದ್ದಾರೆ. ತೂಕಮಾಡಿ ಕೊಡದಿರುವುದರಿಂದ ಸಹಕಾರ ಸಂಘಗಳವರೂ ತೂಕಮಾಡಿ ಕೊಡುತ್ತಿಲ್ಲ. ಆದುದರಿಂದ ಕಡ್ಡಾಯವಾಗಿ ತೂಕಮಾಡಿ ಕೊಡುವಂತೆ ಆಜ್ಞೆಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಆ ರೀತಿ ದೂರು ಬಂದಿದೆ, ಅದನ್ನು ಸರಿಪಡಿಸಲು ಕಾರ್ಯಕ್ರಮ ಏದೆ, ಇನ್ನುಮೇಲೆ ಹಾಗಾಗುವುದಿಲ್ಲ ಎಂಬ ನಿರೀಕ್ಷೆಯಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಗೊಬ್ಬರ ಸರಬರಾಯಾಗುವುದೇ ನಿಧಾನ, ರೈತರಿಗೆ ಅದು ಅವಶ್ಯಕವಾಗಿ ಬೇಕು. ಆದರೆ ದರ ತಿಳಿಸುವುದು ಒಂದೆರಡು ತಿಂಗಳಷ್ಟು ನಿಧಾನವಾಗುತ್ತದೆ, ಕೇಳಿದರೆ ದರ ತಿಳಿಸಿಲ್ಲವೆಂದು ಹೇಳುತ್ತಾರೆ. ಆದುದರಿಂದ ಗೊಬ್ಬರ ಬಂದ ತಕ್ಷಣ ದರವನ್ನೂ ತಿಳಿಸುವಂತೆ ಏರ್ಪಾಡುಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ವಿಷಯ ತಿಳಿಸಿದ್ದಾರೆ, ಅದನ್ನು ವಿಚಾರ ಮಾಡಬೇಕು.

ಶ್ರೀ ಎಚ್. ಆರ್. ಕೇಶವಮೂರ್ತಿ.—ಸೊಸೈಟಿಗಳಿಗೆ ಕೊಡುವ ಗೊಬ್ಬರ ಸಾಮಾನ್ಯವಾಗಿ ಬಡವರಿಗೆ ಸಿಕ್ಕುತ್ತಿಲ್ಲ. ಅದಕ್ಕೆ ಬಡವರಿಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟು ವಿ.ಎಲ್.ಡಬ್ಲ್ಯೂ ಮೂಲಕ ಸಾಲದ ರೂಪದಲ್ಲಾದರೂ ಬಡವರಿಗೆ ಹಂಚುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಈ ವಿಷಯ ಮಾನ್ಯ ಸದಸ್ಯರು ಸಿಕ್ಕುತ್ತಿಲ್ಲವೆಂದು ಹೇಳುತ್ತಾರೆ, ವಿಚಾರಮಾಡೋಣ.

ಶ್ರೀ ಎನ್. ನಂಜೇಗೌಡ.—ನೂಪರ್ ಫಾಸ್ಫೇಟಿಗೆ ಕಂಟ್ರೋಲ್ ದರ ಇಲ್ಲ. ಆದುದರಿಂದ ದರ ನಿಗದಿಮಾಡಿ ನ್ಯಾಯವಾದ ದರಕ್ಕೆ ದೊರೆಯುವ ಹಾಗೆ ಏರ್ಪಾಡು ಮಾಡುತ್ತೀರಾ ? ಈಗ ಮನಸ್ಸಿಗೆ ಬಂದಹಾಗೆ ಮಾರುತ್ತಿರುವುದನ್ನು ತಪ್ಪಿಸುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಎರ್ಲಾ ಕಡೆಯೂ ಸಿಕ್ಕುವ ವಸ್ತು. ಆ ರೀತಿ ಹೆಚ್ಚುಕಡಮೆ ದರದಲ್ಲಿ ಮಾರಿದರೆ ಆ ರೀತಿ ಮಾರಬಾರದೆಂದು ಸಂಬಂಧಪಟ್ಟವರಿಗೆ ತಿಳಿಸುತ್ತೇವೆ.

ಶ್ರೀ ಬಿ. ಚನ್ನಬೈರೇಗೌಡ.—ಎರಡು ತಿಂಗಳಿಂದ ಫ್ಯಾಕ್ಟರಿ ಮತ್ತು ಸರಕಾರ ದರ ಗೊತ್ತು ಮಾಡಿಲ್ಲ. ಇದರಿಂದ ಗೊಬ್ಬರದ ಹಂಚಿಕೆಗೆ ತೊಂದರೆಯಾಗಿದೆ. ಆದುದರಿಂದ ಆದಷ್ಟು ಜಾಗ್ರತೆ ಮಾಡಿ ತಿಳಿಸುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಬಹುಶಃ ಇದುವರೆಗೆ ತಿಳಿಸಿರಬೇಕು, ತಿಳಿಸಿಲ್ಲದಿದ್ದರೆ ತಿಳಿಸುವಂತೆ ಸೂಚನೆಮಾಡೋಣ.

ಶ್ರೀ ಎಚ್. ಡಿ. ದೇವೇಗೌಡ.—ಪರ್ಚೆಸ್ಯಿನರ್ಸ್‌ಗೆ ಕಂಟ್ರೋಲಿದೆ, ಅಮೋನಿಯಂ ನಿರ್ಟ್ರೇಟ್, ನೈಟ್ರೋಫಾಸ್ಫೇಟ್ ಮುಂತಾದುವುಗಳನ್ನು 50 ಕೆ. ಜಿ.ವರೆಗೆ ಹಂಚಲು ಪರ್ಮಿಟ್ ಬೇಕಾಗಿಲ್ಲ. ಇದರಲ್ಲಿ ವಿ. ಎಲ್. ಡಬ್ಲ್ಯೂ, ಬಿ. ಡಿ. ಓ. ಕೋ-ಆಪರೇಟಿವ್ ಎಕ್ಸ್‌ಟೆನ್‌ಷನ್ ಆಫೀಸರು, ಅಗ್ರಿಕಲ್ಚರಲ್ ಎಕ್ಸ್‌ಟೆನ್‌ಷನ್ ಆಫೀಸರು ಮುಂತಾದವರ ಡ್ಯೂಯಲ್ ಕಂಟ್ರೋಲಿದೆ. ಇದನ್ನು ರದ್ದುಪಡಿಸಿ ವಿ. ಎಲ್. ಡಬ್ಲ್ಯೂಗೂ ರೈತರಿಗೂ ನೇರ್ಪರ್ಕವಿರುವುದರಿಂದ ಅದರ ಮೂಲಕವೇ ರೈತರಿಗೆ ಹಂಚುವಂತೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರ ಸೂಚನೆಯನ್ನು ಪರಿಶೀಲನೆಮಾಡಬೇಕು.

ಶ್ರೀ ಸಿದ್ದಯ್ಯ ಕಾತೀಮಠ.—ಸಹಕಾರ ಸಂಘದ ಮೂಲಕ ಮಾರುವ ಗೊಬ್ಬರದ ಬೆಲೆ ಖಾಸಗಿಯವರು ಮಾರುವುದಕ್ಕಿಂತ ಜಾಸ್ತಿ ಇದೆ. ಆದುದರಿಂದ ಏಕರೂಪವಾದ ದರದಲ್ಲಿ ಮಾರಾಟ ಮಾಡುವಂತೆ ವ್ಯವಸ್ಥೆಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಹಾಗೆ ಇರಲಲ್ಲ, ಇದ್ದರೆ ವಿಚಾರಿಸುತ್ತೇವೆ.

ಶ್ರೀ ಎಸ್. ಎಂ. ಕೃಷ್ಣ.—ಅಮೋನಿಯಂ ನಿರ್ಟ್ರೇಟ್, ನೈಟ್ರೋಫಾಸ್ಫೇಟ್ ಮುಂತಾದುವುಗಳನ್ನು ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕುಗಳಲ್ಲಿ ಹಂಚಲು ಒಂದು ಸಮಿತಿ ಇದೆ. ಅದರಲ್ಲಿ ಅಗ್ರಿಕಲ್ಚರಲ್ ಎಕ್ಸ್‌ಟೆನ್‌ಷನ್ ಆಫೀಸರು ಬಿ.ಡಿ.ಓ. ಮತ್ತು ಇನ್ನೊಬ್ಬರಿದ್ದಾರೆ. ಅವರು ಮಾಡಿರುವ ವಿಚಾರನನ್ನು ತಾಲ್ಲೂಕು ಸಮಿತಿ ಕಾರ್ಯಗತಮಾಡದಿದ್ದರೆ ಸಂಬಂಧಪಟ್ಟ ಸೊಸೈಟಿಯಮೇಲೆ ಸರಕಾರ ಸೂಕ್ತ ಕ್ರಮ ಕೈಗೊಳ್ಳುವುದೇ ?

ಶ್ರೀ ಎಸ್. ನಿಜಲಿಂಗಪ್ಪ.—ಹಾಗೇನಾದರೂ ಇದ್ದರೆ ವಿಚಾರ ತಿಳಿಸಿದರೆ ಸೂಕ್ತ ಪ್ರಮಾಣ ತೆಗೆದು ಕೊಳ್ಳಬೇಕಾಗುತ್ತದೆ.

ಶ್ರೀ ಎನ್. ನಂಜೇಗೌಡ.—ಸಹಕಾರ ಸಂಸ್ಥೆಗಳು ವಿಲೇವಾರಿಯಾದಾಗ ಸರ್ಕಾರ ಸೊಸೈಟಿಗೆ 9 ರೂಪಾಯಿ, ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗೆ 11 ರೂಪಾಯಿ, ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಗೆ 10 ರೂಪಾಯಿ ಹೀಗೆ 30 ರೂಪಾಯಿ ಹಂಚಿಕೆಯಾಗುತ್ತದೆ. ಕೇವಲ 2-3 ಸಾವಿರ ರೂಪಾಯಿ ವ್ಯಾಪಾರ ಮಾಡುವುದಕ್ಕೆ 9 ರೂಪಾಯಿ ಮಾಡಿ ಕೋಟಿಗಟ್ಟಲೆ ವ್ಯಾಪಾರಮಾಡುವುದಕ್ಕೆ 10-11 ರೂಪಾಯಿ ಮಾಡಿರುವುದು ಸರಿಯಲ್ಲ. ಇದನ್ನು ಯೋಚಿಸಿ ಸೇವಾ ಸಹಕಾರ ಸಂಘಗಳಿಗೆ ಹೆಚ್ಚು ಕೊಡುವ ಹಾಗೆ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅದಾಗುವುದಿಲ್ಲ, ಎಲ್ಲವನ್ನೂ ಆಲೋಚನೆ ಮಾಡಿ ಆ ರೀತಿ ಮಾಡಿದ್ದಾಗಿದೆ.

Sri B. BHASKER SHETTY (Kaup).—Sir, I put Question No. 383.

Mr. SPEAKER.—Yes.

Sanctioning of Electric Pumpsets.

*Q.—383. Sri DAYANAND R. KALLE (Karkal).—

Will the Government be pleased to state :—

(*a*) the number of electricpump sets for which applications have been received during 1961-63, 1963-64, 1964-1965 and 1965-66 in Karkal Taluk, South Kanara District ;

(*b*) the number of pumpsets that are sanctioned and installed during the above said years ;

(*c*) the number of acres that are brought under (i) crops and (ii) food crops by these installations during the above said years ?

A.—Sri G. B. SHANKAR RAO (Parliamentary Secretary to the Minister for Public Works).—

(*a*) and (*b*) *Vide* Statement appended.

(*c*) About one acre can be brought under cultivation per H. P. of installed capacity which will yield about half a ton of foodgrains.

Statement showing the applications received, pumpsets issued, serviced, etc., in Karkal Taluk, South Kanara District.

Sl. No.	Particulars	Year				Total
		1962-63	1963-64	1964-65	1965-66	
1	Applications received	Nil	110	34	13	157
2	Applications processed.	...	58	27	10	95
3	Pumpsets issued. ...	...	45	11	2	58
4	Pumpsets serviced out of Item No. 3.	...	39	5	...	44